> ‘ಒಮ್ಮೆ ಕಾಫಿ ಮಾಡಿಕೊಂಡು ಕುಡಿದು ವಾಹನದಿಂದ ಹೊರಬಂದೆ. ಕತ್ತೆತ್ತಿ ನೋಡಿದರೆ ಕಂಡದ್ದು ಲಕ್ಷಾಂತರ ನಕ್ಷತ್ರಗಳು ತುಂಬಿ ತುಳುಕುತ್ತಿದ್ದ ನಿಚ್ಚಳವಾದ ಆಕಾಶ. ಹಲವಾರು ನಕ್ಷತ್ರ ಪುಂಜಗಳನ್ನು ಗುರುತಿಸುತ್ತಾ ಒಬ್ಬಳೇ ಎಷ್ಟೊಂದು ಸಂತೋಷಿಸಿದೆ. ಆ ನೀರವತೆ, ಸ್ತಬ್ಧವಾಗಿದ್ದ ಸುತ್ತಲಿನ ಪ್ರಪಂಚ ನಾನೀ ಭೂಮಿಯ ಮೇಲೆ ಇಲ್ಲವೇನೋ ಎಂಬಂಥಾ ಭಾವನೆ ಮೂಡಿಬಂತು. ಆ ಅನುಭವವನ್ನು ಶಬ್ದಗಳಲ್ಲಿ ಕಟ್ಟುವುದು ಸಾಧ್ಯವೇ ಇಲ್ಲ!’

ಗುರುತಿಸಿತು. ಅದಾದ ಮೇಲೆ ಪ್ರತಿ ವರ್ಷವೂ ಒಂದಲ್ಲ ಒಂದು ಹೊಸ ದಾರಿಯನ್ನು ಹುಡುಕಿ ನಿಧಿ ‘ಆಫ್ ರೋಡ್ ಡ್ರೈವಿಂಗ್’ ಸಾಹಸವನ್ನು ಮಾಡುತ್ತಿದ್ದಾರೆ.

## ಅಂತರರಾಷ್ಟ್ರೀಯ ಯಾತ್ರೆ

ಕ್ರಮೇಣ ತಮ್ಮನ್ನು ‘ಅತಿಸಾಹಸ ಓವರ್ ಲ್ಯಾಂಡರ್’ ಎಂದು ಗುರುತಿಸಿಕೊಂಡ ನಿಧಿ, ಅಕ್ಟೋಬರ್ 2015ರಲ್ಲಿ ಇಬ್ಬರು ಗೆಳತಿಯರೊಡನೆ ದೆಹಲಿಯಿಂದ ಲಂಡನ್ ಗೆ ಹೊರಟೇಬಿಟ್ಟರು. ಎರಡು ಖಂಡಗಳನ್ನು, 17 ದೇಶಗಳನ್ನು ಸುತ್ತಿ , 23,800 ಕಿಮೀ ಗಳನ್ನ ಕ್ರಮಿಸಿ ದೂರದ ಲಂಡನ್ ನಗರವನ್ನು ತಲುಪಿಯೇಬಿಟ್ಟರು. ಅವರೊಬ್ಬರೇ ವಾಹನವನ್ನು ಡ್ರೈವ್ ಮಾಡಿದ್ದು, ಜೊತೆಗಿದ್ದವರು ಸೌಮ್ಯ ಗೋಯಲ್ ಮತ್ತು ರಶ್ಮಿ ಕೊಪ್ಪರ್. ಇದು ಸಂಪೂರ್ಣ ಭಾರತೀಯ ಮಹಿಳಾ ತಂಡ. ಮಹಿಂದ್ರಾ ಫಸ್ಟ್ ಚಾಯ್ಸ್ ವೀಲ್ಸ್ ಕಂಪನಿ ಅವರ ಮೊತ್ತ ಮೊದಲ ಪ್ರಾಯೋಜಕರಾಗಿ ಬಂದು ಮಹಿಂದ್ರಾ ಸ್ಕಾರ್ಪಿಯೋ ವಾಹನವನ್ನು ಆ ಸಾಹಸಕ್ಕೆ ಕೊಟ್ಟಿತ್ತು.

ನಂತರ ಕೈಜೋಡಿಸಿದ್ದು ಕೇಂದ್ರ ಯುವಜನ ಮತ್ತು ಕ್ರೀಡಾ ಇಲಾಖೆ. ವಿವಿಧ ದೇಶಗಳ ವೀಸಾ, ರಸ್ತೆ ಪರವಾನಗಿ ಇತ್ಯಾದಿ ಕಾಗದಪತ್ರಗಳನ್ನು ಹೊಂದಿಸಿಕೊಳ್ಳುವ ಜವಾಬ್ದಾರಿಯೆಲ್ಲಾ ನಿಧಿಯವರದ್ದೇ! ಒಂದೇ ವಾಹನ, ಬ್ಯಾಕ್ ಅಪ್ ವಾಹನ ಕೂಡ ಇಲ್ಲ! ಮ್ಯಾನ್ಮಾರ್ ದೇಶದಿಂದ ಚೈನಾಗೆ ತಲುಪಿ ಅಲ್ಲಿಂದ ಕಿರ್ಗಿಸ್ತಾನ್, ಕಝುಕಿಸ್ತಾನ್ ಮೂಲಕ ಪ್ರಯಾಣ. ಶಾಲೆಯಲ್ಲಿ ಕುಶಾನರ ಬಗ್ಗೆ ಓದಿದ್ದು, ಬಾಬರನ ಬಗ್ಗೆ ಇದ್ದ ಕುತೂಹಲ ನಿಧಿಯನ್ನು ಉಜ್ಬೆಕಿಸ್ತಾನ್ ಕಡೆಗೆ ಎಳೆದೊಯ್ದಿತು. ರಷ್ಯಾ, ನಂತರ ಫಿನ್‌ಲೆಂಡ್ ನಿಂದ ಯೂರೋಪ್ ಪ್ರವೇಶ. ‘ಲಂಡನ್ ತಲುಪಿದಾಗ ನನಗೇ ನಂಬುವುದು ಕಷ್ಟವಾಯಿತು’ ಎಂದು ನಗುತ್ತಾರೆ, ನಿಧಿ. ಮೂರು ತಿಂಗಳು ಮೂವರು ಮಹಿಳೆಯರು ಒಂದು ಕಾರಿನಲ್ಲಿಯೇ ವಾಸ ಮಾಡಿದ್ದರು!

## ಸಾಹಸಿಯ ಪಾತ್ರ

ಅವರ ಹರ್ಷಕ್ಕೆ ಮತ್ತಷ್ಟು ಹೊಳಪು ಬಂದಿದ್ದು ನಿಧಿ ದೇಶದ ಉದ್ದಗಲ ಮಹಿಳಾ ಆಫ್ ರೋಡ್ ಮತ್ತು ಓವರ್ ಲ್ಯಾಂಡರ್ ಸಾಹಸಿ ಎಂಬ ಹೆಗ್ಗಳಿಕೆಗೂ ಪಾತ್ರರಾದಾಗ. ಆ ದಿನಗಲ್ಲೇ ಹುಟ್ಟಿದ್ದು ನಿಧಿ ಮತ್ತು ಸ್ಮಿತಾ ರಾಜಾರಾಮ್ ಸ್ಥಾಪಿಸಿದ 'ವಿಮೆನ್ ಬಿಯಾಂಡ್ ಬೌಂಡರೀಸ್ ' ಎಂಬ ಸಂಸ್ಥೆ. ‘ನಮ್ಮ ಸಂಸ್ಥೆಯ ಉದ್ದೇಶ ಮಹಿಳೆಯರಿಗೆ ಅಸಾಧ್ಯವಾದದ್ದು ಏನೂ ಇಲ್ಲ ಎಂಬುದನ್ನು ಜಗತ್ತಿಗೆ ಮನದಟ್ಟು ಮಾಡುವುದು’ ಅನ್ನುತ್ತಾರೆ ನಿಧಿ.

ಅತಿಸಾಹಸ ಓವರ್ ಲ್ಯಾಂಡರ್ ಗಳ ಪ್ರಪಂಚದಲ್ಲಿ ಸಾಹಸ ಮತ್ತು ಅತಿಸಾಹಸ ಎನ್ನುವ ರಸ್ತೆಗಳು, ಪ್ರದೇಶಗಳು ಮತ್ತು ದಾರಿಗಳಿವೆ. ಡ್ರೈವ್ ಮಾಡುತ್ತಾ ಅವುಗಳನ್ನ ಕ್ರಮಿಸುವುದು ಎಂದರೆ ಹೆಗ್ಗಳಿಕೆಯ ವಿಷಯ. ನಿಧಿಯವರದ್ದೇ ಮಾತುಗಳಲ್ಲಿ ಅವರ ಅನುಭವಗಳನ್ನು ಓದಿ: ‘ದೆಹಲಿಯಿಂದ ಲಂಡನ್ ಡ್ರೈವಿಂಗ್ ಮುಗಿಸಿ ಹೆಮ್ಮೆಯಿಂದ ಮನೆಗೆ ಮರಳಿದೆ. ಅದಾಗಲೇ ಮನಸ್ಸಿನಲ್ಲಿ ದೆಹಲಿಯಿಂದ ಸೈಬೀರಿಯಾದ ಪೋಲ್ ಆಫ್ ಕೋಲ್ಡ್ ಪ್ರದೇಶಕ್ಕೆ ಹೋಗುವ ಖಚಿತ ಯೋಜನೆ ಇತ್ತು. ಒಂದು ಸೂಕ್ಷ್ಮವಾದ ನಕ್ಷೆಯೂ ಚಿಗುರೊಡೆದಿತ್ತು. ನಾನೊಬ್ಬಳೇ ಮಾಡಲಿದ್ದ ಈ ಸಾಹಸ ಅತ್ಯಂತ ಕಷ್ಟಕರವಾದದ್ದು ಮತ್ತು ಚಳಿಗಾಲದಲ್ಲಿ ಸೈಬೀರಿಯಾದ –60 ಡಿಗ್ರಿ ಭೀಕರತೆಯನ್ನು ಎದುರಿಸಬೇಕಿತ್ತು ಎಂಬ ಅರಿವು ಚೆನ್ನಾಗಿತ್ತು. ಅದಕ್ಕೂ ಬೇಕಿದ್ದ ಸಿದ್ಧತೆಯನ್ನು ಮಾಡಿಕೊಳ್ಳಲು ಆರಂಭಿಸಿದೆ. ಆದರೂ ಮನಸ್ಸಿನಲ್ಲಿ ಏನಾದರೂ ಆದರೆ ಎಂಬ ಅಳುಕು ಇದ್ದೇ ಇತ್ತು. ಎರಡು ವರ್ಷಗಳಿಂದ ಆ ಮಾರ್ಗದ ಪ್ರಯಾಣ ಮನಸ್ಸಿನಲ್ಲಿದ್ದರೂ 2016ರ ಮಧ್ಯಭಾಗದಲ್ಲಿ ಕಾಗದಪತ್ರ, ವೀಸಾ, ಹಣ, ದಿನದಿಂದ ದಿನಕ್ಕೆ ಬೇಕಿದ್ದ ಅಗತ್ಯ ವಿವರಗಳು ಎಲ್ಲವನ್ನೂ ಹೊಂದಿಸಿಕೊಂಡೆ.’

‘ನನ್ನ ಅತಿ ಸಾಹಸದ ಪ್ರಯಾಣದಲ್ಲಿ ಎದುರಾಗುವ ಸೈಬೀರಿಯಾದ ಚಳಿಗಾಲದ ಹವಾಮಾನ ಬದಲಾವಣೆಗಳು ಹೇಗಿರಬಹುದೆಂಬ ಕಲ್ಪನೆಯೂ ನನಗೆ ಇರಲಿಲ್ಲ. ಇದೇ ಸಾಹಸ ಪ್ರಯಾಣವನ್ನು ಅನೇಕರು ಬೇಸಿಗೆ ಕಾಲದಲ್ಲಿ

### ಯಾತ್ರೆಯಲ್ಲಿ ಮಕ್ಕಳೊಡನೆ ಲೈವ್ ಸಂವಾದ

ನಿಸರ್ಗದೊಡನೆ ಮನಷ್ಯರ ಸಂಬಂಧವನ್ನ ಮತ್ತಷ್ಟು ಗಟ್ಟಿ ಮಾಡುವ ಪ್ರಯತ್ನ ಕೂಡಾ ನಿಧಿಯವರ ಈ ಪ್ರವಾಸದ ಗುರಿಯಾಗಿತ್ತು. ಶೈಕ್ಷಣಿಕವಾಗಿ ಉಪಯೋಗವಾಗುವಂತೆ ದೆಹಲಿಯ 15 ಶಾಲೆಗಳ ಜೊತೆ ಒಗ್ಗೂಡಿ, ಆಯಾ ಶಾಲಾ ಮಕ್ಕಳು ನಿಧಿಯವರ ಸಾಹಸ ಯಾತ್ರೆಯ ಪ್ರತಿಯೊಂದು ದಿನವನ್ನು, ಅವರ ಪ್ರತಿ ಕ್ಷಣದ ಜೀವಂತ ಅನುಭವಗಳನ್ನು ನೋಡಿ ವೀಕ್ಷಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಕೈರಸ್ಕೋಪ್ ಕಂಪನಿ ಅವರಿಗೆ ವಿಡಿಯೋ ಸಂಗಾತಿಯಾಗಿ ಬಂದರೆ, ಇರಿಡಿಯಮ್ ಟೆಕ್ನೋಲಾಜಿಸ್ ಅಗತ್ಯವಿದ್ದ ಡಿಜಿಟಲ್ ಸಂಪರ್ಕವನ್ನು ಶಾಲೆಗಳಿಗೆ ಒದಗಿಸಿತು. ಹಾಗಾಗಿ ಮಕ್ಕಳು ನಿಧಿಯವರೊಡನೆ ನೇರವಾಗಿ ‘ಲೈವ್ ಚಾಟ್’ ನಡೆಸುವಂತೆ ಆಯಿತು. ನಿಧಿ ತಮ್ಮ ಫೇಸ್ ಬುಕ್ ನಲ್ಲಿ ಪ್ರಯಾಣದ ಪ್ರತಿ ವಿವರವನ್ನು ಫೋಟೋಗಳ ಸಮೇತ ಹಂಚಿಕೊಳ್ಳುತ್ತಿದ್ದರು. ದೆಹಲಿಯಲ್ಲಿ ಆ ಮಕ್ಕಳು ಅದನ್ನು ವೀಕ್ಷಿಸಿ, ಅವರ ಜೊತೆ ಆಗಿಂದಾಗ್ಗೆ ಮಾತನಾಡುತ್ತಿದ್ದರು. ಮನುಷ್ಯರು ಹೇಗೆ ಅತೀವ ಹವಾಮಾನ ವೈಪರೀತ್ಯ ಗಳಿಗೆ ಒಗ್ಗಿಕೊಳ್ಳುತ್ತಾರೆ, ಮನಷ್ಯರಲ್ಲಿನ ಸಾಹಸ ಪ್ರವೃತ್ತಿ ಮತ್ತು ಭೂಮಿಯ ಯಾವುದೇ ಭಾಗದಲ್ಲಾದರೂ ಸರಿ ಆ ಪ್ರದೇಶಕ್ಕೆ ತಕ್ಕ ಹಾಗೆ ಬದುಕುವ ಕಲೆಯನ್ನ ಹೇಗೆ ಮನಸ್ಸನ್ನು ಗಟ್ಟಿ ಮಾಡಿಕೊಂಡು ಕಲಿಯುತ್ತಾರೆ ಎಂಬುದನ್ನು ಆ ಶಾಲೆಗಳ ಮಕ್ಕಳು ನೇರವಾಗಿ ನಿಧಿಯವರನ್ನು ಸಂಪರ್ಕಿಸಿ ತಿಳಿದುಕೊಳ್ಳುತ್ತಿದ್ದರು. ಅದರಿಂದ ಆ ಮಕ್ಕಳಲ್ಲಿ ಧೈರ್ಯ, ಆತ್ಮ ವಿಶ್ವಾಸ ಹೆಚ್ಚಿತು.

